<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.</u>

ದಿನಾಂಕ 16 ನೇ ನವೆಂಬರ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :</u> ಎದುರುದಾರರ ಪರ ಶ್ರೀ ಕಿ. ಪಿ. ಬಿ ವಕೀಲರಿಂದಃ-

1. ನನ್ನ ತಂದೆಗೆ ನಾವು 3 ಜನ ಮಕ್ಕಳು. ಅದರಲ್ಲಿ ನಾನು, ನನಗೆ ಒಂದು ಸಹೋದರ ಮತ್ತು ಸಹೋದರಿ ಇದ್ದಾರೆ. ನನ್ನ ಸಹೋದರನಿಗೆ 39 ವಯಸ್ಸಾಗಿದೆ. ಅವರು ಮದುವೆ ಆಗಿ ನನ್ನ ತಂದೆ ಜೊತೆ ಕುಟುಂಬ ಸಮೇತ ವಾಸವಿದ್ದಾರೆ. ನನ್ನ ತಂದೆಗೆ 15 ಎಕರೆ ಕಾಫಿ ತೋಟ ಇರಬಹುದು. ನನ್ನ ತಂದೆಗೆ ಗದ್ದೆ ಇರುವುದಿಲ್ಲ. ನನ್ನ ತಂದೆಗೆ ವರ್ಷಕ್ಕೆ 700 ರಿಂದ 800 ರ ತನಕ ಕಾಫಿ ಚೀಲ ಬೆಳೆ ಬರುತ್ತದೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಅಷ್ಟು ಮಾಹಿತಿ ಇಲ್ಲ ಎನ್ನುತ್ತಾರೆ. ನಾನು ಎಂ. ಬಿ. ಎ. ಪದವೀಧರಳಾಗಿರುತ್ತೇನೆ. ನಾನು ಎಂ. ಬಿ. ಎ.ಯನ್ನು ಬ 2010 ರಲ್ಲಿ ಮಾಡಿರುತ್ತೇನೆ. 2005 ರಲ್ಲಿ ನನ್ನ ಮದುವೆಗಿಂತ ಮುಂಚೆ ನಾನು ಬೆಂಗಳೂರಿನ ಎಲ್ ಐ ಸಿ ಕಚೇರಿ ಕೆಲಸ ಮಾಡುತ್ತಿದ್ದೆ. ಆಗ ನನಗೆ ತಿಂಗಳಿಗೆ ಮಾಸಿಕ ವೇತನ 7,000/- ಇತ್ತು.

2. 1 ನೇ ಎದುರುದಾರರು ಪಿ. ಯು. ಸಿ. ತನಕ ವಿಧ್ಯಾಭ್ಯಾಸ ಮಾಡಿರುತ್ತಾರೆ. ಅವರಿಗೆ ಯಾವುದೇ ಕೆಲಸದಲ್ಲಿ ಇಲ್ಲ ಎಂದರೆ ಸರಿ. ನಿ. ಪಿ. 8, 11, 13 ಮತ್ತು 15 ಮಾತ್ರ 1 ನೇ ಎದುರುದಾರರ ಹೆಸರಿಗೆ ಇದೆ ಎಂದರೆ ಸರಿ. ನಿ. ಪಿ. 11, 13 ಮತ್ತು 15 ರಲ್ಲಿ ಯಾವುದೇ ಬೆಳೆ ನಮೂದು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿ. ಪಿ. 11, 13 ಮತ್ತು 15 ದಾಖಲೆಗಳನ್ನು ತೋರಿಸಿ ಅದರಲ್ಲಿದ್ದ ಬೆಳೆ ಕಾಲಂ ನಲ್ಲಿ ಯಾವುದೆ ಬೆಳೆ ಇಲ್ಲ ಎಂದು ಕೇಳಿದಾಗ ಸಾಕ್ಷಿ ಅವುಗಳನ್ನು ನೋಡಿ ಹೌದು ಎಂದು ನುಡಿದಿರುತ್ತಾರೆ. ನಿ. ಪಿ. 8 ರಲ್ಲಿ 1 ಎಕರೆ 69 ಸೆಂಟ್ ಕಾಫಿ ತೋಟ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಉಳಿದ ಪಹಣಿ ಪತ್ರಿಕೆಗಳು 1 ನೇ ಎದುರುದಾರರ ಹೆಸರಿಗೆ ಇಲ್ಲ ಎಂದರೆ ಸರಿ.

3. ನನ್ನ Assets and liabilities ನಲ್ಲಿ 1 ನೇ ಎದುರುದಾರರಿಗೆ 1 ವರ್ಷಕ್ಕೆ 70 ಲಕ್ಷ ಆದಾಯ ಇದೆ ತೋರಿಸಿದ್ದೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು 1 ನೇ ಎದುರುದಾರರ ಒಟ್ಟು ಕುಟುಂಬದ ಆದಾಯ ಎನ್ನುತ್ತಾರೆ. 1 ನೇ ಎದುರುದಾರರ ಹೆಸರಿನಲ್ಲಿ ಎಷ್ಟು ವಾಹನಗಳು ಇದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. 8 ವಾಹನಗಳು ಇದೆ 1 ನೇ ಎದುರುದಾರರ ಮನೆಯಲ್ಲಿ ಇದ್ದ ವಾಹನಗಳು

ಎಂದು ತೋರಿಸಿರುತ್ತೇನೆ. ನಾನು 30 ಎಕರೆ ತೋಟ ತೋರಿಸಿದ್ದು, ಅದು 1 ನೇ ಎದುರುದಾರರ ಒಟ್ಟು ಕುಟುಂಬದವರಿಗೆ ಸೇರಿದೆ ಎಂದರೆ ಸರಿ.

4. ನಾನು 1 ನೇ ಎದುರುದಾರರ ಜೊತೆ ಮದುವೆ ಆದಾಗಿನಿಂದಲೂ ಸದರಿಯವರ ತಂದೆ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. 2 ನೇ ಎದುರುದಾರರ 1 ನೇ ಎದುರುದಾರರ ತಂದೆ ಎಂದರೆ ಸರಿ. 2 ನೇ ಎದುರುದಾರರ ನನ್ನ ಜೀವನಾಂಶಕ್ಕೆ ಹಣವನ್ನು ಕೊಡುತ್ತಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಈವಾಗ ಯಾವುದೇ ಹಣವನ್ನು ನೀಡುತ್ತಿಲ್ಲ ಎನ್ನುತ್ತಾರೆ. ಈ ಪ್ರಕರಣದ ದಾಖಲಾಗುವ ಪೂರ್ವದಲ್ಲಿ ಅಂದರೆ ಮಾರ್ಚ್ 2024 ರಿಂದ 2 ನೇ ಎದುರುದಾರರು ಯಾವುದೇ ಜೀವನಾಂಶ ನೀಡುತ್ತಿಲ್ಲ ಎನ್ನುತ್ತಾರೆ. 1 ನೇ ಎದುರುದಾರರ ನನ್ನ ವಿರುದ್ಧ ವಿವಾಹ ವಿಚ್ಛೇದನೆ ಕೋರಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯ, ವಿರಾಜಪೇಟೆಯಲ್ಲಿ ಎಂ. ಸಿ. ಸಂಖ್ಯೆ 53/2024 ಸಲ್ಲಿಸಿದ್ದಾರೆ ಎಂದರೆ ಸರಿ. ನಾನು ಸದರಿ ಪ್ರಕರಣದಲ್ಲಿ ಹಾಜರಾಗಿದ್ದೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನಗೆ ನೋಟೀಸ್ ನಂತರ ನಾನು ಈ ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

5. ನಾನು ಮತ್ತು 1 ನೇ ಎದುರುದಾರರು ನಮ್ಮ ಮದುವೆ ಆದ ನಂತರ 6 ರಿಂದ 7 ತಿಂಗಳವರೆಗೆ ಚೆನ್ನಾಗಿದ್ದೆವು. ನಂತರ ಸಹ ನಮ್ಮ ಮಧ್ಯದಲ್ಲಿ ಸಣ್ಣ ಪುಟ್ಟ ಗಲಾಟೆ ಆದರೂ ಸಹ ನಾವು ಅನ್ಯೋನ್ಯವಾಗಿದ್ದೆವು. ನಮ್ಮ ಮದುವೆ ಆಗಿ 1 ವರ್ಷದ ನಂತರ ನಮಗೆ ಗಂಡು ಮಗ ಜನಿಸಿರುತ್ತಾನೆ. 2 ನೇ ಎದುರುದಾರರು ಮದುವೆಯನ್ನು ಅದ್ದೂರಿಯಾಗಿ ಮಾಡಿರುತ್ತಾರೆ ಎಂದರೆ ನನ್ನ ತಂದೆ ಮತ್ತು 2 ನೇ ಎದುರುದಾರರು ಸೇರಿ ಮದುವೆ ಮಾಡಿರುತ್ತಾರೆ ಎನ್ನುತ್ತಾರೆ. ನನ್ನ ತಂದೆ ಎಷ್ಟು ಹಣವನ್ನು ಮದುವೆಗೋಸ್ಕರ ಖರ್ಚು ಮಾಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಸಣ್ಣ ಪುಟ್ಟ ವಿಷಯಕ್ಕಾಗಿ ನಮ್ಮ ನಡುವೆ ಜಗಳ ಆಗುತ್ತಿತ್ತು. ಮೊದಲನೇ ಮಗುವಿಗೆ ನಾನು ಜನ್ಮ ಕೊಟ್ಟ ನಂತರ ಹೆರಿಗೆ ಮುಗಿಸಿಕೊಂಡು 1 ನೇ ಎದುರುದಾರರ ಮನೆಗೆ 5 ತಿಂಗಳ ನಂತರ ಬಂದಿರುತ್ತೇನೆ. ಮಗುವಿನ ನಾಮಕರಣ Silver Sky Gonikoppa ದಲ್ಲಿ ಎದುರುದಾರರು ಸೇರಿ ಅದ್ದೂರಿಯಾಗಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ ಸಹ ಹಣವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.